ಎಸ್. ಶ್ರೀಧರ್, ಬೆಂಗಳೂರು

*ಆಸೆಗೆ ಕೊನೆಯೇ ಇಲ್ಲದವನನ್ನು ಏನೆಂದು ಕರೆಯಬಹುದು?*



ನಿತ್ಯಕಾಮಿ!

ಮುಕುಂದ ಹೆರಕಲ್ಲ, ಗುಲ್ಬರ್ಗಾ

*ಭೋಜನಪ್ರಿಯ ಚಂದ್ರು ಅವರು ಕುದುರೆಯಂತೆ ಕೆನೆಯಲು ಕಾರಣವೇನು?*

ಅವರು ಉಂಡ ಊಟ ಅವರಿಗೆ ಒಂದು ಹಾರ್ಸ್ ಪವರ್‌ನಷ್ಟು ಶಕ್ತಿ ಕೊಟ್ಟಿದೆ ಎಂದು ತೋರಿಸಲು!

ಪಿ.ಜೆ. ರಾಘವೇಂದ್ರ, ಮೈಸೂರು

*ದೀರ್ಘಸುಮಂಗಲೀ ಭವ ಎನ್ನುವುದು ಆಶೀರ್ವಾದವೋ, ಶಾಪವೋ?*

ಆಶೀರ್ವಾದವೇ; ಮಕ್ಕಳ ಕೈಗೆ ಸಿಕ್ಕಿ ವೃದ್ಧಾಶ್ರಮಕ್ಕೆ ಹೋಗುವುದಕ್ಕಿಂತ ಪತಿಯಿರುವಾಗಲೇ ಗೇಟ್‌ಪಾಸ್ ಪಡೆಯುವುದು ಸೂಕ್ತ.

ಎಂ.ಎನ್. ಸೋಮಶೇಖರ್, ಮೈಸೂರು

*ಬ್ರಹ್ಮದೇವರ ಮೇಲೆ ಏಕೆ ಯಾವ ರಾಕ್ಷಸನೂ ಯುದ್ಧ ಮಾಡಿಲ್ಲ?*



ನಾಲ್ಕು ದಿಕ್ಕಿನಲ್ಲೂ ತಲೆ ಇರುವುದರಿಂದ ಆಕ್ರಮಣ ಮಾಡಬೇಕಾದ ದಿಕ್ಕು ತೋಚದಂತಾಗಿದೆಯಂತೆ.

ಸುಶೀಲ ರಾಮಣ್ಣ, ಬೆಂಗಳೂರು

ಮಾರ್ಕೆಟಿನಲ್ಲಿ ಸಿಗುವ ಸೇಬಿಗೆ ಸ್ಟಿಕ್ಕರ್ ಹಾಕುವ ಹಾಗೆ ಹಲಸಿಗೂ ಹಾಕಿದರೆ ಅದು ನ್ಯೂಝಿಲೆಂಡ್ ಹಲಸು ಅಂತ ಮಾರಬಹುದಲ್ವಾ?

ನಿಮ್ಮಂತಹ ಸುಶೀಲೆಗೂ ಇಂತಹ ಯೋಚನೆ ಬಂದ ಮೇಲೆ ಇನ್ನುಮುಂದೆ ಹಲಸೂ ಹೊಲಸೇ.

ಕೆ.ಟಿ. ರುದ್ರಪ್ಪ, ಚಿತ್ರದುರ್ಗ

*ಮದುವೆಯಾದ ಮೊದಲ ವರ್ಷ ಆಷಾಡದಲ್ಲಿ ಅತ್ತೆ- ಸೊಸೆಯರು ಒಟ್ಟಿಗೆ ಇರಬಾರದಂತೆ. ಏಕೆ?*

ಅದು ಅಂದಿನ ಕಾಲ. ಈಗ 'ಮದುವೆಯಾದ ಮೊದಲ ವರ್ಷ' ಮತ್ತು 'ಆಷಾಡದಲ್ಲಿ' ಎಂಬ ಷರತ್ತುಗಳನ್ನು ಕೈಬಿಡಲಾಗಿದೆ.

ಎಸ್.ಹೆಚ್. ಮಹೇಶ್, ಕೊಟ್ಟೂರು

*ಸ್ತ್ರೀಲಿಂಗ, ಪುಲ್ಲಿಂಗ, ನಪುಂಸಕಲಿಂಗಗಳಲ್ಲಿ ಅತ್ಯಂತ ಶ್ರೇಷ್ಠವಾದ ಲಿಂಗ ಯಾವುದು ಎನ್ನಬಹುದು ಸಾರ್?*

ಇವೆಲ್ಲದರಲ್ಲೂ ಇರುವ ಆತ್ಮಲಿಂಗ.

ಎಚ್. ಆನಂದ್ ಕುಮಾರ್, ಚಿತ್ರದುರ್ಗ

*ಸಂತೆಯಲ್ಲಿ ನಿದ್ದೆ, ಸದನದಲ್ಲಿ ನಿದ್ದೆ, ಸಮಾರಂಭಗಳಲ್ಲಿ ನಿದ್ದೆ. ಹೀಗೇಕೆ ರಾಮ್?*

'ಅಭಿವೃದ್ಧಿಯ ಕನಸುಗಳ ಬೆನ್ನುಹತ್ತಲು' ಎಂದರಾ ನಿದ್ರಾಮರ್!

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಮಾತು ಬೆಳ್ಳಿ, ಮೌನ ಬಂಗಾರ ಅಂತಾರಲ್ಲ, ನಿಮ್ಮದು ಯಾವುದು?*

ನಾಲಿಗೆ ಮುಳ್ಳು, ಕಿವಿ ಹಿತ್ತಾಳೆ!

ಆರ್. ಮಧುಸೂದನ್, ಹಾಸನ

*ಪುಸ್ತಕಪ್ರೇಮಿಯನ್ನು ಮದುವೆ ಆಗುತ್ತಿದ್ದೇನೆ. ದಾಂಪತ್ಯಕ್ಕೆ ತೊಂದರೆ ಇಲ್ಲ ತಾನೆ?*

ಅಕೌಂಟಲ್ಲಿ ಕಾಸಿದ್ದಷ್ಟು ದಿನ ತೊಂದರೆಯಿಲ್ಲ. ಸರಿಯಾಗಿ ತಿಳಿದುಕೊಳ್ಳಿ; ಆಕೆ ಕೇವಲ ಪುಸ್ತಕಪ್ರೇಮಿಯಲ್ಲ, ಚೆಕ್‌ಪುಸ್ತಕಪ್ರೇಮಿ!

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ಕಾರು ಓಡಿಸುವಾಗಲೂ ಉಪಯೋಗವಾಗದ, ನಿಂತಿರುವಾಗಲೂ ಉಪಯೋಗಕ್ಕೆ ಬಾರದ ನ್ಯೂಟ್ರಲ್ ಗೇರ್‌ನ ಅಗತ್ಯವಾದರೂ ಏನು?*

ಕಾರ್ ಕೆಟ್ಟಾಗ ತಳ್ಳಲು ನ್ಯೂಟ್ರಲ್ಲೇ ಐಡಿಯಲ್ಲು.

ಎ.ಕೆ. ಪಟ್ಟಾಭಿ, ಬೆಂಗಳೂರು

*ಸ್ತ್ರೀಬುದ್ಧಿ ಪ್ರಳಯಾಂತಕ ಎಂಬ ಮಾತಿದೆ. ಪುರುಷರ ಬುದ್ಧಿ?*

ಪ್ರಣಯಾಂತಕ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಹನಿ ರಕ್ತಕ್ಕೂ, ಹನಿ ಬೆವರಿಗೂ ವ್ಯತ್ಯಾಸ?*

ಬೆವರು ಹನಿಸಿದರೆ ಫಸಲು, ರಕ್ತ ಹನಿಸಿದರೆ ಫೈಸಲ್!

## ಬಹುಮಾನಿತ ಪ್ರಶ್ನೆ

ಬಿ.ಆರ್. ಶೋಭಾ, ಹೊಳೆನರಸೀಪುರ

*ಓಎಲ್‌ಎಕ್ಸ್‌ನಲ್ಲಿ ಮಾರಿಬಿಡಿ ಎಂಬ ಜಾಹೀರಾತು ನೋಡಿ ನೀವೂ ಏನಾದರೂ ಮಾರಿದ್ದೀರಾ?*

ಪ್ರಯತ್ನಿಸಿದೆ; 'ಕ್ಷಮಿಸಿ; ನಿಮ್ಮ ಕನ್ನಡ ಪುಸ್ತಕಗಳನ್ನು ಓಎಲ್‌ಎಕ್ಸ್ ಅಲ್ಲ, ಓಹಿಲೇಶ್ವರನೂ ಮಾರಲಾಗುವುದಿಲ್ಲ' ಎನ್ನುತ್ತಾ ಹಿಂತಿರುಗಿಸಿದರು!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಅತ್ಯಾಚಾರ ಮಾಡಿದ ಕಾಮುಕರನ್ನು ನೀರಿಲ್ಲದ ಮರುಭೂಮಿಯಲ್ಲಿ ಬಿಟ್ಟರೆ?*

ಖರ್ಜೂರ ತಿಂದು ಬದುಕಿಬಿಟ್ಟಾವು; ಹುಚ್ಚುನಾಯಿಗೆ ಮರಣವೇ ಶಾಸ್ತಿ.

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್

*ಕನ್ನಡ ಸಾಹಿತ್ಯ ಸಮ್ಮೇಳನದಿಂದ ಕನ್ನಡ ಉದ್ಧಾರವಾಗುತ್ತಿದೆಯಾ?*

ಕನ್ನಡ, ಸಾಹಿತ್ಯ ಹೇಗಾದರೂ ಇರಲಿ, ಅಧ್ಯಕ್ಷರ ಉದ್ಧಾರವಂತೂ ಸೊಗಸಾಗಿ ಆಗುತ್ತಿದೆ.

ಪೆಮ್ಮನಹಳ್ಳಿ ಚಿಕ್ಕಣ್ಣ ಶಶಿ, ಪಾವಗಡ

*ನಾನು ಕೋಲಾರ, ನೀನು ಭದ್ರಾವತಿ ಹೋಗೋಲೇ ಅಂತಾಳೆ.....?*



ಕಬ್ಬಿಣದ ತಿಜೋರಿಯಲ್ಲೇ ಬಂಗಾರ ಸುರಕ್ಷಿತ ಬಾರಮ್ಮೀ ಅನ್ನಿ!

ವೈ.ಜಿ. ನರಸಿಂಹನ್, ಶಿವಮೊಗ್ಗ

*ಒಮ್ಮೊಮ್ಮೆ ಗಂಡಸರು ಕೂಡ ಹೆಂಗಸರಂತೆ ಜೋರಾಗಿ ಅಳುತ್ತಾರೆ. ಏಕೆ ಸಾರ್?*

ಹಾಗೆ ಅಳಿಸುವ ತಾಕತ್ತು ಹೆಂಗಸರಿಗೆ ಇರುವುದರಿಂದ!

ಜಗದೀಶ ಎಂ. ಸಂಗಣ್ಣವರ, ಹುಣಶೀಕಟ್ಟಿ

*ಇಂದಿನ ಸೊಸೆಯರು ಅತ್ತೆಗೆ ಮನೆಗೆಲಸ ಹಚ್ಚಿ ತಾವು ಮಾತ್ರ ಟಿವಿಯ ಮುಂದೆ ಕುಳಿತುಕೊಳ್ಳುವರಲ್ಲ?*

ಟಿವಿ ಎಂದರೆ ಗೋಳೇ ಅಲ್ಲವೇ; ಜೀವನದಲ್ಲಿ ಗೋಳೆಲ್ಲಾ ತಮಗೇ ಇರಲಿ, ಅತ್ತೆಗೆ ಬೇಡ ಎಂಬ ಸದುದ್ದೇಶ.

■ ರಾಮ್